■ ಹನಿ

## ಪಾಪ, ರೊನಾಲ್ಡೊ!



ಯೂರೋ ಕ್ಲಬ್ ಫುಟ್‌ಬಾಲ್‌ನಲ್ಲಿ ಎಲ್ಲರ ಕಣ್ಣು ಇದ್ದದ್ದು ಕ್ರಿಸ್ಟಿಯಾನೋ ರೊನಾಲ್ಡೊ ಮೇಲೆಯೇ. ಪೋರ್ಚುಗಲ್ ತಂಡದ ನಾಯಕನಾಗಿ ರೊನಾಲ್ಡೊ ಈ ಸಲ ಯೂರೋ ಕಪ್‌ಅನ್ನು ತನ್ನ ದೇಶಕ್ಕೆ ಗೆದ್ದು ಕೊಂಡೊಯ್ಯಬಹುದು ಎಂಬ ದೂರದ ಆಸೆ ಆತನ 'ಎಲ್ಲ ದೇಶಗಳ ಅಭಿಮಾನಿ'ಗಳಲ್ಲೂ ಇತ್ತು. ಎದುರಾಳಿ ಆಟಗಾರರ ಎಲ್ಲ ಒತ್ತಡಗಳ ನಡುವೆಯೂ ಏಕಾಂಗಿಯಾಗಿಯೇ ಚೆಂಡನ್ನು ಗೋಲ್‌ಪೋಸ್ಟ್‌ವರೆಗೆ ಕೊಂಡೊಯ್ದು ಗೋಲು ಗಳಿಸಬಲ್ಲ ಆತನ ಎದೆಗಾರಿಕೆ ಯೂರೋ ಕಪ್ ಆರಂಭದ ಪಂದ್ಯದಿಂದಲೇ ಗೋಚರಿಸಿತ್ತು. ಅದಕ್ಕೆ ತಕ್ಕಂತೆ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಈತ ಗಳಿಸಿದ ಮಿಂಚಿನ ಗೋಲು ಅಭಿಮಾನಿಗಳಲ್ಲಿ ಸಂಚಲನ ಮೂಡಿಸಿತ್ತು. ಸೆಮಿಫೈನಲ್‌ನಲ್ಲಿ 'ಎರಡು ಬಾರಿಯ ಚಾಂಪಿಯನ್', ಬಲಿಷ್ಠ ಸ್ಪೇನ್ ತಂಡದ ವಿರುದ್ಧ ರೊನಾಲ್ಡೊ ಮ್ಯಾಜಿಕ್ ಖಂಡಿತಾ ನಡೆಯಬಹುದು ಎಂಬ ನಿರೀಕ್ಷೆ ಇತ್ತು. ಆದರೆ ಅದೃಷ್ಟ ರೊನಾಲ್ಡೊ ವಿರುದ್ಧವಿತ್ತು. ನಿಗದಿತ ಅವಧಿಯಲ್ಲಿ ಸಮಬಲದ ಹಾಗೂ ಭುಜಬಲದ ಹೋರಾಟ ಕಂಡುಬಂದ ಪಂದ್ಯದಲ್ಲಿ ಕೊನೆಗೂ ಸ್ಪೇನ್ ಪೆನಾಲ್ಟಿ ಕಾರ್ನರ್‌ನಲ್ಲಿ 4-2ರ ಜಯ ಗಳಿಸಿ ಮುನ್ನಡೆಯಿತು. ರೊನಾಲ್ಡೊಗೆ ಪೆನಾಲ್ಟಿ ಕಾರ್ನರ್ ಹೊಡೆಯುವ ಅವಕಾಶವೂ ಸಿಗಲಿಲ್ಲ. ಕೊನೇ ಪೆನಾಲ್ಟಿ ಹೊಡೆತವನ್ನು ತನಗಾಗಿ ಕಾಯ್ದಿಟ್ಟಿದ್ದ ರೊನಾಲ್ಡೊ, ನಾಲ್ಕನೇ ಹೊಡೆತದಲ್ಲೇ ಸ್ಪೇನ್ 4-2ರ ಮುನ್ನಡೆ ಪಡೆದಾಗ ನಿರಾಶೆಯಿಂದ ಆಕಾಶ ನೋಡಬೇಕಾಯಿತು.

ಈ ಸಲ ಯೂರೋ ಕಪ್‌ನಲ್ಲಿ ಜರ್ಮನಿ, ಇಟಲಿ, ಇಂಗ್ಲೆಂಡ್, ಸ್ಪೇನ್ ಮುಂತಾಗಿ ಹಲವು ತಂಡಗಳಲ್ಲೂ 'ಅತಿರಥ ಮಹಾರಥ'ರಿದ್ದರು. ಇಂಗ್ಲೆಂಡಿನ ರೂನೀ ಖ್ಯಾತಿಯಲ್ಲಿ ಎಲ್ಲರಿಗಿಂತ ಮುಂದಿದ್ದ. ಆದರೆ ರೊನಾಲ್ಡೊ ಬಗ್ಗೆ ಹೆಚ್ಚು ನಿರೀಕ್ಷೆಗೆ ಬೇರೆ ಕಾರಣ ಗಳಿದ್ದವು. ಕಳೆದ ಮೂರು ಸೀಸನ್‌ಗಳಲ್ಲಿ ಕ್ಲಬ್ ಫುಟ್‌ಬಾಲ್‌ನಲ್ಲಿ ಒಂದೇ ಸಮನೆ ಗೋಲುಗಳನ್ನು ಹೊಡೆಯುತ್ತಿರುವವನು ರೊನಾಲ್ಡೊ. ಪ್ರತಿ ಸೀಸನ್‌ನಲ್ಲೂ 60ಕ್ಕೂ ಹೆಚ್ಚು ಗೋಲು ಹೊಡೆಯುವುದು ಕಡಿಮೆ ಸಾಹಸವೇನಲ್ಲ. ಅದರಲ್ಲೂ ರಿಯಲ್ ಮ್ಯಾಡ್ರಿಡ್ ಕ್ಲಬ್ ತಂಡ ಮುಖ್ಯವಾಗಿ ಈತನ ಆಟದಿಂದಲೇ ಇವತ್ತು ಚಾಂಪಿಯನ್ ಅನ್ನಿಸಿಕೊಂಡಿದೆ. ಮ್ಯಾಂಚೆಸ್ಟರ್ ಯುನೈಟೆಡ್ ಕ್ಲಬ್‌ನಿಂದ ಈತನನ್ನು ಖರೀದಿಸುವಾಗ ರಿಯಲ್ ಮ್ಯಾಡ್ರಿಡ್ ಕ್ಲಬ್, ಈತನಿಗೆ 131 ದಶಲಕ್ಷ ಡಾಲರ್ ಹಣ ಕೊಟ್ಟದ್ದಲ್ಲದೆ, ವರ್ಷಕ್ಕೆ 12 ದಶಲಕ್ಷ ಯೂರೋಗಳ ಕಾಂಟ್ರಾಕ್ಟ್‌ಗೆ ಸಹಿ ಹಾಕಿದ್ದು ವ್ಯರ್ಥವಾಗಲಿಲ್ಲ. ಜಗತ್ತಿನ ಅತ್ಯಂತ ಶಕ್ತಿಶಾಲಿ ಫುಟ್‌ಬಾಲ್ ಕ್ಲಬ್ ಎಂಬ ಹೆಸರು ಸಹಜವಾಗಿಯೇ ಅದಕ್ಕೆ ದಕ್ಕಿದೆ.

ರೊನಾಲ್ಡೊನ ಶಕ್ತಿಶಾಲಿ ಹಾಗೂ ಕೌಶಲಪೂರ್ಣ ಹೊಡೆತಗಳ ಖ್ಯಾತಿ ಎಷ್ಟಿದೆಯೆಂದರೆ ಈತ ಆಟವಾಡುವ ಪಂದ್ಯದ ಟಿಕೆಟ್‌ಗಳು ಒಂದೇ ದಿನದಲ್ಲಿ ಮಾರಾಟವಾಗುತ್ತಿವೆ. ಈತನನ್ನು ತಮ್ಮ ಕ್ಲಬ್‌ಗೆ ಖರೀದಿಸಲು ಬೇರೆ ಕ್ಲಬ್‌ಗಳು ಸತತವಾಗಿ ಹೊಂಚು ಹಾಕುತ್ತಿವೆ. 26ರ ಹರೆಯದ ರೊನಾಲ್ಡೊನನ್ನು (ಬರ್ತ್‌ಡೇ 5-2-1985) ಡಿಯಾಗೊ ಮರಡೋನಾ ಇತ್ತೀಚೆಗೆ 'ಭೂಮಂಡಲದ ಅತ್ಯುತ್ತಮ ಆಟಗಾರ' ಎಂದು ಕರೆದದ್ದು ಸುಮ್ಮನೆ ಅಲ್ಲ. ಆದರೆ ಯೂರೋ ಕಪ್ ಸೆಮಿಫೈನಲ್, ತನ್ನ ದೇಶಕ್ಕೆ ಮೊದಲ ಬಾರಿ ಯೂರೋ ಕಪ್ ಗೆದ್ದುಕೊಡುವ ರೊನಾಲ್ಡೊನ ಕನಸುಗಳನ್ನು ಹೊಸಕಿ ಹಾಕಿದೆ.

## ಹಿಮಾಲಯದಲ್ಲಿ ಬರ್ತ್‌ಡೇ



ಬಾಲಿವುಡ್‌ನಲ್ಲಿ ಬರ್ತ್‌ಡೇ ಪಾರ್ಟಿಗಳೆಂದರೆ ಸಖತ್ ಮಜಾ! ಇಲ್ಲಿ ಸೂಪರ್‌ಸ್ಟಾರ್‌ಗಳು ಹುಟ್ಟುಹಬ್ಬವನ್ನು ಆಚರಿಸುವುದೆಂದರೆ, ಕುಡಿತ, ಕುಣಿತ, ಮೋಜಿನ ಹೇಶಾರವ! ಆದರೆ ಸದ್ಯಕ್ಕೆ ಬಾಲಿವುಡ್‌ನ ಅತ್ಯಂತ ಬೇಡಿಕೆಯ, ಸೂಪರ್‌ಸ್ಟಾರ್ ಸಂಗೀತ ನಿರ್ದೇಶಕ ಪ್ರೀತಂ ಚಕ್ರವರ್ತಿ ಅದರಲ್ಲೂ ವಿಭಿನ್ನ. ಬಾಲಿವುಡ್‌ನ ಎಲ್ಲ ಗದ್ದಲಗಳಿಂದ ದೂರವಾಗಿ ಹಿಮಾಲಯದ ವೈಷ್ಣೋದೇವಿಗೆ ಯಾತ್ರೆ ಹೋಗಿದ್ದೇ ಪ್ರೀತಂ ದಾ ಬರ್ತ್‌ಡೇ ವಿಶೇಷ! 'ಎಷ್ಟೋ ವರ್ಷಗಳಿಂದ ವೈಷ್ಣೋದೇವಿಗೆ ಹೋಗಬೇಕು ಎಂದುಕೊಂಡಿದ್ದೆ. ಇಲ್ಲಿ ಎಷ್ಟು ಕೆಲಸವಿದೆಯೆಂದರೆ ಗಡ್ಡ ಕೆರೆದುಕೊಳ್ಳಲೂ ಪುರುಸೊತ್ತಿಲ್ಲ. ಈಗ ಒಂದು ನೆಪ ಒದಗಿಬಂತು. ವೈಷ್ಣೋದೇವಿ ದರ್ಶನವೂ ಆಯಿತು' ಎಂದು ಪೊದೆ ಗಡ್ಡದ ಮೇಲೆ ಕೈಯಾಡಿಸಿ ನಕ್ಕಿದ್ದಾರೆ ಪ್ರೀತಂ.

41ರ ಹರೆಯದ ಪ್ರೀತಮ್ ದಾ, (ಬರ್ತ್‌ಡೇ: ಜೂನ್ 14) ಕಳೆದ 11 ವರ್ಷಗಳಲ್ಲಿ ಬಾಲಿವುಡ್‌ನಲ್ಲಿ ಏರಿರುವ ಎತ್ತರ ಬೆರಗು ಹುಟ್ಟಿಸುವಂತಿದೆ. ಅಪ್ಪ-ಅಮ್ಮ ಇಬ್ಬರೂ ಸೇರಿ ನಡೆಸುತ್ತಿದ್ದ ಸಂಗೀತ ಶಾಲೆಯಲ್ಲಿ ಕಲಿತು, ಬಾಲ್ಯದಲ್ಲೇ ಗಿಟಾರ್ ಹಿಡಿದ ಪ್ರೀತಂ ಬಾಲಿವುಡ್‌ಗೆ ಕೆಲಸ ಅರಸಿಕೊಂಡು ಬಂದಾಗ, ಇಲ್ಲಿ ಯಾರೂ ಕೈ ಹಿಡಿದು ಒಳಗೆ ಕರೆದೊಯ್ಯಲಿಲ್ಲ. ಆರಂಭದ ಎರಡು ವರ್ಷಗಳಲ್ಲಿ ಸಿಕ್ಕಿದ ಅವಕಾಶಗಳಲ್ಲಿ ಫ್ಲಾಪ್ ಸಂಗೀತ ಕೊಟ್ಟದ್ದೂ ಪ್ರೀತಂಗೆ ದುಬಾರಿಯಾಯಿತು. ಆದರೆ 'ಧೂಮ್' ಎನ್ನುವ ಚಿತ್ರದಲ್ಲಿ ನೀಡಿದ ಭರ್ಜರಿ ಸಂಗೀತ ಪ್ರೀತಂ ಎಂಬ ಸ್ಟಾರ್‌ನನ್ನು ಹುಟ್ಟುಹಾಕಿತು. ಇವತ್ತು ಬಾಲಿವುಡ್‌ನಲ್ಲಿ ಪ್ರೀತಂ ಎಷ್ಟು ಬ್ಯುಸಿ ಎಂದರೆ, 2013ರಲ್ಲಿಯೂ 10 ಸಿನಿಮಾಗಳಿಗೆ ಸಂಗೀತ ನೀಡಲು ಈಗಾಗಲೆ ಒಪ್ಪಂದಕ್ಕೆ ಸಹಿ ಹಾಕಿಯಾಗಿದೆ! 2012ರಲ್ಲಿ ಈಗಾಗಲೆ 3 ಸಿನಿಮಾಗಳು ಬಿಡುಗಡೆಯಾಗಿದ್ದು, ಇನ್ನೂ 6 ಸಿನಿಮಾಗಳು ಕೈಯಲ್ಲಿವೆ! ಗೋಲ್‌ಮಾಲ್, ದೋಸ್ತಾನಾ, ಒನ್ಸ್ ಅಪಾನ್ ಎ ಟೈಮ್ ಮುಂತಾದ ಸೂಪರ್‌ಹಿಟ್ ಚಿತ್ರಗಳ ಸೀಕ್ವೆಲ್‌ಗಳಲ್ಲೂ ಪ್ರೀತಂರದ್ದೇ ಸಂಗೀತ. 'ನಿರ್ಮಾಪಕರು ಫೋನ್ ಮಾಡಿದರೆ ಎತ್ತಲೂ ಭಯವಾಗುತ್ತದೆ. ಈಗ ಇರುವ ಕೆಲಸದ ಹಿನ್ನೆಲೆಯಲ್ಲಿ ಇನ್ಯಾವ ಹೊಸ ಕೆಲಸವನ್ನೂ ಒಪ್ಪಿಕೊಳ್ಳುವಂತಿಲ್ಲ. ಹೆಂಡತಿ– ಮಕ್ಕಳ ಮುಖ ನೋಡದೆ ತಿಂಗಳಾನುಗಟ್ಟಳೆ ಸ್ಟುಡಿಯೋದಲ್ಲೇ ವಾಸ ಮಾಡುವ ಪರಿಸ್ಥಿತಿ ಬಂದಿದೆ. ಇನ್ನು ಮುಂದೆ ವರ್ಷಕ್ಕೆ ಐದು ಸಿನಿಮಾಗಿಂತ ಹೆಚ್ಚಿನದನ್ನು ಒಪ್ಪಿಕೊಳ್ಳುವುದಿಲ್ಲ' ಎನ್ನುವುದು ಪ್ರೀತಮ್ ದಾ ಮಾತು.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65